ಹೋಗೇ ಇಲ್ಲ..." ಎಂದಳು ಸುಜಾತಾ ತಪ್ಪೊಪ್ಪಿಗೆಯ ಧ್ವನಿಯಲ್ಲಿ. ಸರಿ... ಸಂಜಯ ಎರಡು ದಿನಗಳ ರಜೆ ಮಂಜೂರು ಮಾಡಿಸಿಕೊಂಡ. ಮಕ್ಕಳು ರಜೆ ಹೊಂದಿಸಿಕೊಂಡು ಪರಿವಾರಸಮೇತರಾಗಿ ಸವದತ್ತಿ ಎಲ್ಲಮ್ಮನ ದರ್ಶನಕ್ಕೆ ಹೊರಟರು. ಅಲ್ಲಿ ಮೈದುನ, ಓರಗಿತ್ತಿಯರೂ ಜೊತೆಗೂಡಿದರು. ದೇವಿಯ ದರ್ಶನವಾಯಿತು. ಸೇವೆಯೂ ನಡೆಯಿತು. "ಗುರುಗೊಳ ದರ್ಶನ ಆದ್ರ ಎಲ್ಲಾ ಪೀಡಾ ಪರಿಹಾರ ಆಗ್ತದ" ಎಂದರು ಪಾಂಡುರಂಗರಾಯರು. ಪರಿವಾರ ಗಾಣಗಾಪುರಕ್ಕೆ ಬಂದು ಭೀಮಾ ನದೀತೀರದಲ್ಲಿ ಮಿಂದು ದರ್ಶನ, ಪೂಜೆ, ಮಾಧುಕರಿ ಸೇವೆ ಸಾಂಗವಾಗಿ ನಡೆದು ಎಲ್ಲ ಸುಪ್ರೀತರಾದರು. ಸುಜಾತಾ, ಸಂಜಯ ಒಂದು ಬಗೆಯ ನಿಶ್ಚಿಂತತೆಯ ಭಾವದಲ್ಲಿ ಮಕ್ಕಳೊಂದಿಗೆ ಬೆಂಗಳೂರಿಗೆ ಮರಳಿದರು.

ಬಹಳ ದಿನಗಳಿರಲಿಲ್ಲ ಆ ನಿಶ್ಚಿಂತತೆ. ಹದಿನೈದು ದಿನಗಳಲ್ಲಿ ಕನಸು ಮತ್ತೆ ಮರುಕಳಿಸಿತು. ಮತ್ತದೇ ವ್ಯಕ್ತಿ... ಮಾತುಗಳಲ್ಲಿ ತೀಕ್ಷ್ಣತೆ ಹೆಚ್ಚಿತ್ತು. ಹಿಂದಣ ಪರಿಸರ ಬದಲು. ಆಳವಾದ ಸುರಂಗದ ಮುಂದೆ ನಿಂತು ಮಾತನಾಡುತ್ತಿದ್ದ. "ಏನ ಬೇಖಾದ್ದ ಮಾಡು... ಏಷ್ಟ ಹಾರ್ಯಾಡ್ತೀಯೋ ಹಾರ್ಯಾಡು. ನನ್ನ ಸುರಂಗದಾಗ ಹೊಕ್ಕಬಿಟ್ಟೀ ಈಗ. ನನ್ನ ಧೂರ ಸರಸ್ಲಿಕ್ಕಾಗೂದುಲ್ಲ" ಎಂದು ಗಹಗಹಿಸಿ ಬಾಯಗಲಿಸಿ ನಕ್ಕಿದ್ದ. ಎಲೆ ಅಡಿಕೆ ತಿಂದು ಕೆಂಪಾದ ಹಲ್ಲುಗಳನ್ನು ಕೂಡ ಸುಜಾತ ಸ್ಪಷ್ಟವಾಗಿ ನೋಡಿ ಥರಗುಟ್ಟುತ್ತ ಎದ್ದಿದ್ದಳು. ಸಂಜಯ ಎಷ್ಟು ಸಂತೈಸಿದರೂ ಕಣ್ಣೀರು ಸುರಿಯಿತು. ಮಕ್ಕಳೂ ಗಾಬರಿಯಾಗಿ ಮಂಕಾದರು. ಬಂಧುಗಳು... ಆತ್ಮೀಯರು... ಪರಿಚಿತರು... ಎಲ್ಲರೂ ತಮಗೆ ತಿಳಿದ ಪರಿಹಾರ ಸೂಚಿಸಿದರು. "ಗುರುವಾರ ಒಪ್ಪೊತ್ತು ಉಪಾಸಾ ಹಿಡಿದು ರಾಯರಿಗೆ ಬೇಡಿಕೊ..." ಎಂದವರಿದ್ದರು. "ಮಂಗಳವಾರ, ಶುಕ್ರವಾರ ದೇವಿಯ ದೇವಸ್ಥಾನದಲ್ಲಿ ನಿಂಬೆಹಣ್ಣಿನ ದೀಪ ಹಚ್ಚಿ" ಎಂದಾರೋ ಹೇಳಿದರು. "ಗಣೇಶನಿಗೆ ಇಪ್ಪತ್ತೊಂದು ದಿನ ಪೂಜೆ ಮಾಡಿ. ವಟುವಿಗೆ ವಸ್ತ್ರದಾನ ನೀಡಿ"ಎನ್ನುವ ಸಲಹೆ ಬಂದಿತ್ತು. "ಸಾಯಿಬಾಬಾನ ಭಜನೆ ಮಾಡಿ", "ಗೋಂದಾವಲಿ ಮಹಾರಾಜರ ಭಜನೆ ಮಾಡಿ", "ಶನಿದೇವರಿಗೆ ಪ್ರತಿ ಶನಿವಾರ ಹೋಗಿ ಐದು ಪ್ರದಕ್ಷಿಣೆ ಹಾಕಿ ಬನ್ನಿ" – ಇತ್ಯಾದಿ ಪರಿಹಾರಗಳು ಪುಂಖಾನುಪುಂಖವಾಗಿ ಬಂದಿದ್ದವು. ಸುಜಾತ ಮುಕ್ಕೋಟಿ ದೇವತೆಗಳಲ್ಲೊಬ್ಬರನ್ನೂ ಬಿಡದೇ ಪೂಜಿಸಿದಳು. ರಾತ್ರಿ ಕೆಟ್ಟ ಕನಸು ಬೀಳದೇ ಇರಲು ದುಃಸ್ವಪ್ನ ನಿವಾರಣಾ ಮಂತ್ರ ಪಠಿಸಿದಳು. "ಚತುರ್ಭುಜಂ ರಕ್ತ ತನುಂ ತ್ರಿನೇತ್ರಂ, ಪಾಶಾಂಕುಶೌ ಮೋದಕ ಪಾತ್ರ ದಂತಂ, ಕರೈರ್ದ್ಧ ಧ್ಯಾನಂ ಸರಸಿರುಹಸ್ತಂ, ಗಣಾಧಿನಾಥಂ ಶಶಿಚೂಡಮೀಢೆ" ಎಂದು ಮಲಗುವ ಮುನ್ನ ಇಪ್ಪತ್ತೊಂದು ಬಾರಿ ಪಠಿಸುತ್ತಿದ್ದಳು. ಹರಕೆ ಕಟ್ಟಿಕೊಂಡಳು. ಕೊರಳ ತುಂಬ ಕರಿದಾರ, ತೋಳಮೇಲೆ ತಾಯಿತ... ಹಣೆಯಲ್ಲಿ ಭಂಡಾರ, ಅಂಗಾರವಿಟ್ಟು ಮಹಾಭಕ್ತೆಯಾಗಿ ಕೈಮುಗಿದಳು. ಆಯುಷ್ಯಕ್ಕಾಗಿ ಅಂಗಲಾಚಿ ಹನಿಗಣ್ಣಾಗಿ ಬೇಡಿಕೊಂಡಳು. ಹಿಂದೆ ಸಂಜಯ ಮತ್ತು ಮಕ್ಕಳೂ ಕಣ್ಣುಂಬುತ್ತ ನಿಂತರು. ಸಂಜಯ ಎಲ್ಲೆಡೆ ಸೇವೆ ಮಾಡಿಸಿ... ಹುಂಡಿಗೆ ದುಡ್ಡು ಹಾಕಿ ಪುನೀತನಾದ.

ಆದರೂ ಕನಸಿನ ಕರಿನೆರಳು ಬಿಡಲೇ ಇಲ್ಲ. ಸುಜಾತ ಈಗ ಕಣ್ಮುಚ್ಚಿ ನಿದ್ದೆ ಮಾಡಲೂ ಅಳುಕತೊಡಗಿದಳು. ಕನಸು ಬಿದ್ದರೆ.. ಎಂಬ ಭಯದಲ್ಲೇ ಬಾಳತೊಡಗಿದಳು. ಊಟ, ತಿಂಡಿಗಳಲ್ಲಿ ಆಸಕ್ತಿ ಕಡಿಮೆಯಾಯಿತು. ಯಾರ ಸಾಂತ್ವನವೂ ಪ್ರಯೋಜನವಾಗಲಿಲ್ಲ. ಅವಳ ಪ್ರೀತಿಯ ಹವ್ಯಾಸಗಳಾದ ಪೇಂಟಿಂಗ್, ಕಸೂತಿ, ಓದು ಮುಂತಾದವುಗಳಲ್ಲಿ ತೊಡಗಿಸಿಕೊಳ್ಳಲು ಮಕ್ಕಳು ಮತ್ತು ಸಂಜಯ ಎಷ್ಟೇ ಪ್ರೇರೇಪಿಸಿದರೂ ಸಾಧ್ಯವಾಗಲಿಲ್ಲ. ಎಲ್ಲರಿಗೂ ಬೆಳಗ್ಗೆ ನೆನಪಿಗೆ ಸಹ ಬಾರದೇ ಇರುವ ರಾತ್ರಿಯ ಕನಸುಗಳು ತನ್ನನ್ನು ಮಾತ್ರ ವಿಪರೀತವಾಗಿ ಕಾಡುತ್ತಿರುವುದು ನುಂಗಲಾರದ ತುತ್ತಾಗಿತ್ತು. ಶೂನ್ಯದಲ್ಲಿ ದೃಷ್ಟಿ ನೆಟ್ಟು ಕುಳಿತುಬಿಡುವುದಿತ್ತು. ಮನೆಯ ಪರಿಸ್ಥಿತಿ